# ಯು.ಆರ್. ಅನಂತಮೂರ್ತಿ ಅವರ ವ್ಯಕ್ತಿತ್ವದ ಆಂಶಿಕ ರೂಪ 'ಸೂರ್ಯನ ಕುದುರೆ'

**ಕೊಟ್ರಯ್ಯ ಎಚ್. ಹೊಂಬಳಮಠ**

ಕನ್ನಡ ಉಪನ್ಯಾಸಕರು, ಬಾಲಕಿಯರ ಸರಕಾರಿ ಪದವಿ ಪೂರ್ವು ಕಾಲೇಜು, ಬೆಳ್ಳಟ್ಟಿ.

DOI: https://doi.org/10.5281/zenodo.17257793

## ABSTRACT:

ಆಧುನಿಕ ಕನ್ನಡ ಸಾಹಿತ್ಯದಲ್ಲಿ 1950ರಿಂದ 1970ರ ವರೆಗೆ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡ ಪಂಥ ನವ್ಯ. ಈ ನವ್ಯ ಪಂಥದ ಪ್ರಮುಖ ಬರಹಗಾರರಲ್ಲಿ ಯು. ಆರ್. ಅನಂತಮೂರ್ತಿಯವರು ಒಬ್ಬರು. ತಮ್ಮದೇಯಾದ ತಾತ್ವಿಕ ವಿಚಾರಗಳ ಮೂಲಕ ಸೃಜನಶೀಲ ಹಾಗೂ ಸೃಜನೇತರ ಬರವಣಿಗೆಯಲ್ಲಿ ತಮ್ಮದೇಯಾದ ಸೈದ್ಧಾಂತಿಕತೆಯನ್ನು ಪ್ರತಿಪಾದಿಸಿದರು. ಕನ್ನಡ ಸಣ್ಣ ಕಥಾ ಪರಂಪರೆಗೆ ಪ್ರಮುಖವಾಗಿ 'ಎಂದೆಂದೂ ಮುಗಿಯದ ಕಥೆ' 'ಪ್ರಶ್ನೆ', 'ಮೌನಿ', 'ಆಕಾಶ ಮತ್ತು ಬೆಕ್ಕು', 'ಸೂರ್ಯನ ಕುದುರೆ', 'ಪಚ್ಚೆ ರೆಸಾರ್ಟ್' ಕಥಾ ಸಂಕಲನವನ್ನು ನೀಡಿದ್ದಾರೆ.

1995ರಲ್ಲಿ ಪ್ರಥಮ ಬಾರಿಗೆ ಬಿಡುಗಡೆಗೊಂಡ ಇವರ ಕಥಾ ಸಂಕಲನ 'ಸೂರ್ಯನ ಕುದುರೆ'. 'ಸೂರ್ಯನ ಕುದುರೆ' ಎಂಬುದು ನಾಲ್ಕು ಕಥೆಗಳನ್ನು ಒಳಗೊಂಡ ಕಥಾ ಸಂಕಲನವಾಗಿದೆ. ಇದರಲ್ಲಿ 'ಸೂರ್ಯನ ಕುದುರೆ', 'ಅಕ್ಕಯ್ಯ', 'ಕಾಮರೂಪಿ', ಹಾಗೂ 'ಜರತ್ಕಾರು' ಎಂಬ ನಾಲ್ಕು ಕಥೆಗಳನ್ನು ಒಳಗೊಂಡಿದೆ.

ಜಿ. ಎಸ್ ಅಮೂರ ಅವರು ಕೃತಿಯ ಪ್ರಸ್ತಾವನೆಯಲ್ಲಿ “ಅನಂತ ಮೂರ್ತಿಯವರ ಸಾಹಿತ್ಯದಲ್ಲಿ ಚರಿತ್ರೆಯ ಶೋಧ ಅನುಭವದ ನೆಲೆಯಲ್ಲಿ ನಡೆಯುವುದರಿಂದ ಅದು ಆತ್ಮಚರಿತ್ರೆಯು ಆಗುವುದು ಅನಿವಾರ್ಯ. 'ಸೂರ್ಯನ ಕುದುರೆ'ಯ ಎಲ್ಲಾ ಕಥೆಗಳ ನಾಯಕರು ಅನಂತಮೂರ್ತಿಯವರ ವ್ಯಕ್ತಿತ್ವದ ಆಂಶಿಕ ಬಿಂಬ ಪ್ರತಿಬಿಂಬಗಳೇ ಆಗಿವೆ” ಎಂದು ಅಭಿಪ್ರಾಯಿಸುತ್ತಾರೆ.

ಅನಂತಮೂರ್ತಿಯವರ ಕಥೆಗಳಲ್ಲಿ ಇತಿಹಾಸವನ್ನು ಸಂಶೋಧಿಸುವುದರೊಂದಿಗೆ ತಮ್ಮ ಆತ್ಮಚರಿತ್ರೆಯ ಎಳೆಗಳನ್ನು ದಾಖಲಿಸುವ, ಅವರ ವ್ಯಕ್ತಿತ್ವದ ಸಣ್ಣ ಸಣ್ಣ ಅಂಶಗಳು ಅವರ ಕಥೆಗಳಲ್ಲಿರುತ್ತವೆ ಎಂಬುದನ್ನು ಇವರ ಮಾತು ತಿಳಿಸುತ್ತದೆ.

'ಸೂರ್ಯನ ಕುದುರೆ' ಕಥೆಯಲ್ಲಿ ಅನಂತು ವಿದೇಶಗಳಲ್ಲಿ ಓದಿ ಬಂದವನು. ತನ್ನ ಊರಿಗೆ ಒಮ್ಮೆ ಹೀಗೆ ಭೇಟಿಕೊಟ್ಟಾಗ ಆತನ ಬಾಲ್ಯಕಾಲದ ಸ್ನೇಹಿತ ವೆಂಕಟನ ದರ್ಶನ ಸಂತೆಯಲ್ಲಿ ಆಗುತ್ತದೆ. ಇವರಿಬ್ಬರ ಸ್ನೇಹದ ಜೊತೆ ಜೊತೆಯಲ್ಲಿ ಅನಂತುವಿನ ಆಧುನಿಕತೆಯ ವ್ಯಕ್ತಿತ್ವ, ಆಲೋಚನ ಕ್ರಮಗಳನ್ನು

ಕಾಣಬಹುದು. ಆದರೆ ವೆಂಕಟನದು ಭಾರತೀಯ ಮನಃಸ್ಥಿತಿ. ಅನಂತು ವ್ಯವಸ್ಥೆಯು ಹೀಗೆ ಇದ್ದರೆ ದೇಶ ಹೇಗೆ ಬದಲಾವಣೆಯಾಗುತ್ತದೆ ಎಂಬ ಹೇಳಿಕೆಗೆ ಭಾರತೀಯತೆಯ ಪ್ರತೀಕವಾದ ವೆಂಕಟನು ತಾನು ತಮ್ಮ ಹೆಂಡತಿಯನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲದಿದ್ದಾಗ ಇನ್ನು ಹೇಗೆ ಉಳಿದೆಲ್ಲವನ್ನು ಬದಲಾವಣೆಯನ್ನು ನೋಡಬಹುದೆಂಬ ವಾಸ್ತವ ದೃಷ್ಟಿ ವ್ಯಕ್ತವಾಗುತ್ತದೆ.

## KEYWORDS:

ಅನಂತಮೂರ್ತಿ, ತಾತ್ವಿಕ ದೃಷ್ಟಿ, ಸೂರ್ಯನ ಕುದುರೆ, ವೆಂಕಟನ ವ್ಯಕ್ತಿತ್ವ, ಸುಬ್ಬು, ಕಾಮರೂಪಿ, ವರದಕ್ಷಿಣೆ.

ಆಧುನಿಕತೆ ಮತ್ತು ಪರಂಪರೆಯೊಂದಿಗೆ ಸಾಗುವ ಅನಂತು ಮತ್ತು ವೆಂಕಟರ ನಡುವಿನ ಸಂಭಾಷಣೆಯಲ್ಲಿ ಅನಂತಮೂರ್ತಿಯವರ ವ್ಯಕ್ತಿತ್ವವೇ ಇಣುಕುವುದು ಸಹಜವಾಗಿದೆ. "ಈಚೆಗೆ ಬರೆಯುವುದಕ್ಕೂ ಏನೂ ಹೊಳೆಯುವುದಿಲ್ಲ. ಬಾಯಿ ಬಿಟ್ಟರೆ ದೊಡ್ಡ ದೊಡ್ಡ ಮಾತುಗಳು ಉರುಳುತ್ತವೆ. ಎದುರಿನ ತಲೆಗಳು ತೂಗುತ್ತವೆ. ಈ ನಾಟಕ ಮುಗಿದದ್ದೇ ಭಣ ಭಣ ಎನಿಸುತ್ತದೆ. ನಾನು ಏನನ್ನೂ ಯಾಕೆ ಕಾಣುತ್ತಿಲ್ಲ? ನಿನಗೆ ಕಾಣುತ್ತದೋ ಅಥವಾ ಕಂಡವನಂತೆ ನಟಿಸುತ್ತಿಯೋ? ನಿನ್ನ ಈ ನಿರಹಂಕಾರ ಪೂಜೆಯದು ಅಲ್ಲವೇ? ಅಥವಾ ನಾನು ಬಾಲ್ಯದಲ್ಲಿ ಕಂಡುಂಡ ನಿನ್ನನ್ನು ಬರೆಯದೇ ಏನೇನೋ ದೊಡ್ಡದೆನ್ನೆಲ್ಲ ಬರೆಯಹೋಗಿ ನಾನೀಗ ಖಾಲಿ ಡಬ್ಬಿಯಾಗಿರುವುದೇ?"[1] ಎನ್ನುವಲ್ಲಿ ಬರಹಗಾರರಾದ ಅನಂತಮೂರ್ತಿಯವರ ತಾತ್ವಿಕ ದೃಷ್ಟಿ, ಬರೆಯಲು ಸಾಧ್ಯವಾಗದ ಸ್ಥಿತಿ, ಅಸಾಧ್ಯವಾದ ಸ್ಥಿತಿಯಲ್ಲಿಯೂ ಭಾಷಣ ಮೂಲಕ ತನ್ನ ಮಾತುಗಳನ್ನು ಆಲಿಸುವವರ, ತೋರಿಸುವ ಮೆಚ್ಚುಗೆ, ಹೀಗೆ ಇವರ ವಿಚಾರಗಳು ಮತ್ತು ತಮ್ಮನ್ನೇ ವಿಮರ್ಶಿಸಿಕೊಳ್ಳುವ ದೃಷ್ಟಿಯಿದೆ.

ಒಬ್ಬ ಕಥನಕಾರನ ಅನುಭವವು ಕಥೆಗಳಲ್ಲಿ ಬಹುಮುಖವಾಗಿ ಬರುವುದು ಸಹಜ. ಆದರೆ ಕಥನಕಾರನ ವ್ಯಕ್ತಿತ್ವವು ಕೂಡ ಆಂಶಿಕವಾಗಿ ಬರುವುದನ್ನು ಕಾಣಬಹುದು. ಅದರಂತೆ ಅನಂತಮೂರ್ತಿಯವರ ವ್ಯಕ್ತಿತ್ವವು ಕೂಡ ಆಂಶಿಕವಾಗಿ ಈ 'ಸೂರ್ಯನ ಕುದುರೆ' ಕಥೆಯಲ್ಲಿದೆ ಎನ್ನಬಹುದು. 'ಸೂರ್ಯನ ಕುದುರೆ' ಕಥೆಯಲ್ಲಿ ಅನಂತುವಿನ ಪಾತ್ರ ಆಧುನಿಕತೆಯನ್ನು ಪ್ರತಿಬಿಂಬಿಸಿದರೆ, ಆದರೆ ವೆಂಕಟನ ಪಾತ್ರ ಭಾರತೀಯತೆಯನ್ನು ಪ್ರತಿನಿಧಿಸುತ್ತದೆ. ಅನಂತ ಮೂರ್ತಿಯವರ ವ್ಯಕ್ತಿತ್ವವು ಕೂಡ ಆಧುನಿಕತೆ ಮತ್ತು ಭಾರತೀಯತೆಯನ್ನು ಸಮೀಕರಿಸಿಕೊಂಡಿರುವುದು ಆಗಿದೆ.

ಭಾರತೀಯತೆ ಮತ್ತು ಆಧುನಿಕತೆಯ ಮುಖಾಮುಖಿಯನ್ನು ಇಲ್ಲಿ ಕಾಣಬಹುದು. ಆಧುನಿಕತೆಗೆ ಅನಂತು ನಾಯಕನಾದರೆ ಭಾರತೀಯತೆಯ ಸಂಕೇತವಾಗಿ ವೆಂಕಟನ ವ್ಯಕ್ತಿತ್ವ ಈ ಕಥೆಯಲ್ಲಿ ಮುಖಾಮುಖಿಯಾಗುತ್ತದೆ. ಜಿ.ಎಸ್

ಅಮೂರ ಅವರು ಅನಂತಮೂರ್ತಿಯವರ 'ಸೂರ್ಯನ ಕುದುರೆ' ಹಾಗೂ ಶಿವರಾಮ ಕಾರಂತರ 'ಬೆಟ್ಟದ ಜೀವ' ಕೃತಿಯಲ್ಲಿ ಬರುವ ವ್ಯಕ್ತಿಗಳ ಮುಖಾಮುಖಿ ಉತ್ತಮ ಪುರುಷನಾಮದ ಕಥನ ಮೊದಲಾದ ವಿಚಾರಗಳಲ್ಲಿ ಸಾಮ್ಯತೆಯನ್ನು ಗುರುತಿಸುತ್ತಾರೆ.

ಈ ಕಥೆಯಲ್ಲಿ ಬರುವ ಅನಂತು ಮತ್ತು ವೆಂಕಟನದು ಬಾಲ್ಯದ ಸ್ನೇಹವಾಗಿರುವುದರಿಂದ ಇಬ್ಬರಲ್ಲೂ ಮುಕ್ತತೆ ಇದೆ. ಆ ಮುಕ್ತತೆಯ ಮನೋಭಾವದಿಂದಲೇ ಆಧುನಿಕತೆ ಮತ್ತು ಪರಂಪರೆಗಳು ಮುಖಾಮುಖಿಯಾಗಿ ತಮ್ಮ ವಿಚಾರಗಳಲ್ಲಿ ಬದಲಾಗಬೇಕೆಂಬ ದೃಷ್ಟಿ ವ್ಯಕ್ತವಾಗುತ್ತದೆ. ಶೇಷಣ್ಣನಂತಹ ವಯಸ್ಸಾದವರು ಊರಿನಲ್ಲಿಯೇ ಉಳಿಯುವುದು, ವಿದ್ಯೆ ಕಲಿತು ಆತನ ಮಕ್ಕಳು ಬೇರೆ ದೇಶದಲ್ಲಿ ಹೋಗಿ ನೆಲೆಸುವುದು, ಅಲ್ಲಿನ ಹುಡುಗಿಯನ್ನು ವಿವಾಹವಾಗುವುದು, ಅವರು ಬಂದು ಕರೆಯಲು ತನ್ನ ಯಜಮಾನಿಕೆಯು ಎಲ್ಲಿ ಹೋಗುತ್ತದೆಯೋ ಎಂದು ಭಾವಿಸಿ ಇಲ್ಲೇ ಉಳಿಯುವಂಥ ಶೇಷಣ್ಣನಂತವರು ವಯಸ್ಸಾಗಿ ಅನಾರೋಗ್ಯದಿಂದ ನರಳುತ್ತಿರಬೇಕಾದರೆ ಆರೈಕೆ ಮಾಡುವ ವೆಂಕಟನಂತ ಪರೋಪಕಾರಿಗಳು, ಹೀಗೆ ಒಂದು ಕಡೆ ವಿದ್ಯೆ ಕಲಿತು ಆಧುನಿಕತೆಯನ್ನು ಅಳವಡಿಸಿಕೊಂಡವರು ಮತ್ತೊಂದು ಕಡೆ ತಾನು, ತನ್ನದು ಎಂಬುವುದನ್ನು ಬಿಡಲಾರದ ಶೇಷಣ್ಣನಂತವರ ಮನಃಸ್ಥಿತಿ ಎರಡು ಮುಖಾಮುಖಿಯಾಗಿಸುವ ಕಥೆ ಇದಾಗಿದೆ.

ಪರೋಪಕಾರದ ವ್ಯಕ್ತಿತ್ವದ ವೆಂಕಟನ ವ್ಯಕ್ತಿತ್ವಕ್ಕೆ ಎದುರಾಗಿ ಆತನ ಮಗ ಸುಬ್ಬುನ ವರ್ತನೆ. ಆತ ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ಸೇರಬೇಕೆಂಬ ದೃಷ್ಟಿ. ಆ ದೃಷ್ಟಿಯೇ ಸರಿ ಎನ್ನುವ ವೆಂಕಟನ ಹೆಂಡತಿ ರುಕ್ಕು ಹೀಗೆ ಪರಂಪರೆಯು ಮುಖಾಮುಖಿಯಾಗುವ ಚಿತ್ರಣವಿದೆ. ಒಂದು ಕಡೆ ಹೊಸ ಪೀಳಿಗೆ ಆಧುನಿಕತೆಗೆ ಒಗ್ಗಿಕೊಂಡಿರುವುದು, ಪರಂಪರೆಗೆ ಜೋತು ಬಿದ್ದ ಮತ್ತೊಂದು ಪೀಳಿಗೆ ಆ ಪೀಳಿಗೆಗಳ ಮಾನಸಿಕ ತೊಳಲಾಟ, ಬದುಕಿನ ಧಾವಂತ, ಇವುಗಳನ್ನು ಅನಾವರಣ ಮಾಡುತ್ತದೆ. ಈ ಕಥೆಯಲ್ಲಿ ಬರುವ ಅನಂತುವಿಗೆ ವೆಂಕಟನು ಮಾಡಿಸುವ ಅಭ್ಯಂಜನ ವಿವರಣೆಯು ಕುವೆಂಪುರವರ 'ಅಜ್ಜಯ್ಯನ ಅಭ್ಯಂಜನ'ದ ಕಥೆಯನ್ನು ನೆನಪಿಸುತ್ತದೆ.

ಭಾರತೀಯ ತಾತ್ವಿಕತೆಯಲ್ಲಿ ಬಹಳ ಮುಖ್ಯವಾದುದು ಎಲ್ಲಾ ಅಹಂಗಳನ್ನು ಬಿಟ್ಟು ಮನುಷ್ಯನಾಗುವುದು ಒಂದಾಗಿದೆ. ಮಾನವ ಪ್ರಕೃತಿಯ ಶಿಶು, ಈ ಪ್ರಕೃತಿ ಇಷ್ಟೆಲ್ಲಾ ಸೊಬಗು, ಸೌಂದರ್ಯದಿಂದ ಕೂಡಿದೆ. ಅದಕ್ಕೆ ಕಾರಣ ಸೂರ್ಯ. ಸೂರ್ಯನೆ ಇಲ್ಲದೆ ಈ ಲೋಕದಲ್ಲಿ ಚೈತನ್ಯವೇ ಇಲ್ಲ. ಆದರೂ ತಾನು ತನ್ನಿಂದ ಎಂಬ ಭಾವ ಆ ಸೂರ್ಯನಲ್ಲಿ ಇಲ್ಲ. ಸೂರ್ಯನು ತನ್ನ ಬೆಳಕಿನ ಕಿರಣದ

ಕುದುರೆಯನ್ನೇ ಏರಿ ಇಡೀ ಲೋಕಕ್ಕೆ ಬೆಳಕನ್ನು ನೀಡಿ ಕಗ್ಗತ್ತಲನ್ನು ಹೋಗಲಾಡಿಸಿ ಇಡೀ ಲೋಕಕ್ಕೆ ಅಂತಃ ಚೈತನ್ಯವನ್ನು ಮೂಡಿಸುತ್ತಾನೋ ಅದೇ ರೀತಿ ನಮ್ಮ ವ್ಯಕ್ತಿತ್ವ ಇರಬೇಕು. ಇದೇ ಶಾಶ್ವತ. ಉಳಿದೆಲ್ಲವು ಮಿಥ್ಯ ಎಂಬ ತಾತ್ವಿಕತೆಯನ್ನು ಅನಂತುವಿಗೆ ಅಭ್ಯಂಜನದ ಸಂದರ್ಭದಲ್ಲಿ ವೆಂಕಟ ಹೇಳುವ ಪರಿ ಇಡೀ ಕಥೆಯಲ್ಲಿ ಬಹಳ ಮಹತ್ವದ್ದು ಆಗಿದೆ.

ವೆಂಕಟನ ಮಗ ಸುಬ್ಬು ತನ್ನ ಮನೆಯಲ್ಲಿರುವ ಬೆಲೆ ಬಾಳುವ ವಸ್ತುಗಳನ್ನು ಕದಿಯುವುದು, ಅದಕ್ಕೆ ಅನಂತು ತನ್ನಲ್ಲಿಯೇ ಪ್ರಶ್ನಿಸಿಕೊಳ್ಳುವುದು, ಹಳ್ಳಿಯಲ್ಲಿಯೇ ಕೊಳೆಯ ಬೇಕಾಗಿದ್ದರೆ ನಾನು ಏನಾಗಿರಬಹುದಾಗಿತ್ತು. ನನ್ನ ಮನೆತನದ ನಡಾವಳಿಗಳನ್ನು ಧಿಕ್ಕರಿಸಿದುದರಿಂದಲೇ ತಾನು ಬೆಳೆದು ಹೀಗಾಗಲು ಸಾಧ್ಯವಾದ ಬಗೆ, ಜೊತೆಗೆ 'ವೆಂಕಟನ ಹಡೆ', 'ಅಭ್ಯಂಜನ', ಆತನ ಬೋಳೆ ಸೇವೆ ಯಾವುದು ಕೂಡ ಪ್ರಯೋಜನಕ್ಕೆ ಬರುವುದಿಲ್ಲ. ಆದರೆ ಆಧುನಿಕತೆಗೆ ಒಳಗಾಗಿ ತಾನು ಕಳೆದುಕೊಳ್ಳುತ್ತಿರುವ ಮಾನವ ಪ್ರೀತಿಯು ಮತ್ತೇ ಚಿಗರು ಹೊಡೆಯಲು ಸಾಧ್ಯವಾದುದು. ತನ್ನ ಬಾಲ್ಯ ಕಾಲದ ಸ್ನೇಹಿತ ವೆಂಕಟನಿಂದ ಸಾಧ್ಯವಾಯಿತ್ತು ಎಂಬ ಅನಂತುವಿನ ಯೋಚನಾ ಲಹರಿಯಲ್ಲಿ ಆಧುನಿಕತೆಯೆಂಬುದು ಪರಂಪರೆಯೊಂದಿಗೆ ಮಿಳಿತವಾಗಿ ಪರಂಪರೆಯು ಆಧುನಿಕತೆಯ ಉತ್ತಮ ಅಂಶಗಳಿಗೆ ತನ್ನನ್ನು ತಾನು ತೆರೆದುಕೊಳ್ಳುವ ಇವೆರಡೂ ಒಂದೇ ರಥದ ಎರಡು ಚಕ್ರಗಳಂತೆ ಸಮ ಪ್ರಮಾಣದಲ್ಲಿ ಸಾಗಬೇಕು ಎಂಬುದನ್ನು ಈ ಕಥೆ ಧ್ವನಿಸುತ್ತದೆ. ಈ ಎಲ್ಲಾ ದೃಷ್ಟಿಯಿಂದ ನೋಡಿದಾಗ 'ಸೂರ್ಯನ ಕುದುರೆ' ಅನಂತಮೂರ್ತಿಯವರ ಅತ್ಯುತ್ತಮ ಕಥೆಗಳಲ್ಲಿ ಒಂದಾಗಿದೆ.

ಈ ಸಂಕಲನದಲ್ಲಿರುವ ಎರಡನೇಯ ಕಥೆ – ಕಾಮರೂಪಿ, ರಾಜಕೀಯ ವ್ಯವಸ್ಥೆಯೊಂದಿಗೆ ಮುಖಾಮುಖಿಯಾಗುವುದು ಈ ಕಥೆಯ ವೈಶಿಷ್ಟ್ಯವಾಗಿದೆ. ಶಂಕರ್‌ಬಾಬು ಎಂಬ ವ್ಯಕ್ತಿ ಭಾರತದ ರಾಷ್ಟ್ರೀಯ ಪಕ್ಷವೊಂದರ ಸದಸ್ಯ. ಹೈದ್ರಾಬಾದ್‌ನ ವಿಮಾನ ನಿಲ್ದಾಣ ಲಾಂಜ್‌ನಲ್ಲಿ ಫೋಟೋ ತೆಗೆಯುವಾಗ ಆತ ನಿರೂಪರಿಗೆ ಪರಿಚಯವಾಗುವುದು. ಹೀಗೆ ಜೀವನದ ಅನುಭವದಲ್ಲಿ ಹಾಯ್ದು ಹೋದ ಕಾಮರೂಪಿಯಿಂದ ಕಥೆಯು ಕಥಿಸಿಕೊಳ್ಳುವುದು. ಆತ ಮರಗೆಲಸದ ಸಮುದಾಯಕ್ಕೆ ಸೇರಿದ್ದು ಆಂಧ್ರದ ರಾಜಕೀಯ ವ್ಯಕ್ತಿಯು ಆಗಿದ್ದನು. ಅದು ತೆಲುಗು ದೇಶಂ ಪಾರ್ಟಿಯ ವರ್ಕರ್ ಕೂಡ ಆಗಿದ್ದನು. ಸರೋಜ ಹಾಗೂ ಗೀತ ಎಂಬ ತಂಗಿಯಂದಿರು ಇದ್ದರು. ಸರೋಜಳನ್ನು ಮದುವೆಯಾಗಿದ್ದ ಇವರ ಭಾವ ಗೀತಳನ್ನು ವಿವಾಹವಾಗಲು ಬಯಸುವುದು, ಅದಕ್ಕೆ ಸ್ವಲ್ಪ ಹಣವನ್ನು ಕೊಡುವುದು, ಗೀತ ಆ ಹಣವನ್ನು ಸ್ಟೌವ್‌ನ ಬೆಂಕಿಗೆ ಹಾಕಿ ಪ್ರತಿಭಟಿಸುವುದು, ಮೊದಲಾದವು ಈ ಕಥೆಯಲ್ಲಿದೆ.

ತನ್ನ ಆಸೆಯನ್ನು ಈಡೇರಿಸಿಕೊಳ್ಳಲು ಒಮ್ಮೆ ಕಾಂಗ್ರೆಸ್ ಲೀಡರ್‌ಗಳ ಜೊತೆಯಲ್ಲಿ ಫೋಟೋ ತೆಗೆಸಿಕೊಂಡಿರುವುದು, ಮತ್ತೊಮ್ಮೆ ತೆಲುಗು ದೇಶಂ ಪಾರ್ಟಿ ಲೀಡರ್‌ಗಳ ಜೊತೆ ಗುರುತಿಸಿಕೊಳ್ಳುವುದು, ಈ ರೀತಿಯಲ್ಲಿ ರಾಜಕೀಯವಾಗಿ ಬೆಳೆಯಬೇಕೆಂದು ನಾನಾ ರೂಪಗಳನ್ನು ಧರಿಸುವ ವ್ಯಕ್ತಿತ್ವದ ವ್ಯಕ್ತಿಗಳ ಪ್ರತಿನಿಧಿಯಾಗಿ ಈ ಕಥೆಯ ಶಂಕರ ಬಾಬುವಿನ ಪಾತ್ರವಿದೆ.

ಈ ಕಥೆಯು ಪ್ರಧಾನವಾಗಿ ರಾಜಕೀಯ ವ್ಯಕ್ತಿಗಳ ಸೋಗಲಾಡಿತನ, ಬೋಳೆತನ, ಸಮಯ ಸಾಧಕತನವನ್ನು ಎತ್ತಿ ತೋರಿಸುತ್ತದೆ. ಶಂಕರ ಬಾಬುವಿನಂತಹ ವ್ಯಕ್ತಿಗಳು ರಾಜಕೀಯವಾಗಿ ಬೆಳೆಯಲು ತನ್ನ ತಂಗಿಯಾದ ಗೀತನ್ನು ತನ್ನ ಮೊದಲ ಅಕ್ಕನ ಗಂಡನಿಗೆ ರಾಜಕೀಯ ವ್ಯಕ್ತಿಗಳ ಮಾತಿಗೆ ಒಪ್ಪಿ ಹಣದಾಸೆಯನ್ನು ತೋರಿಸಿ ಎರಡನೆಯ ವಿವಾಹ ಮಾಡುವ ನೀಚ ಸ್ಥಿತಿಗೆ ತಲುಪುವುದು. ಒಂದೇ ಮುಖವಿದ್ದರೂ ಅವನಲ್ಲಿ ಹಲವು ಮುಖಗಳು ಗೋಚರಿಸುತ್ತಿದ್ದವು.

ಫಿಲೆಡೆಲ್ಫಿಯಾದಲ್ಲಿ ಇಂಗ್ಲೀಷ್ ಪ್ರೊಫೆಸರ್ ಆಗಿರುವ ವ್ಯಕ್ತಿ ಶ್ರೀನಿವಾಸ. ಇವರು ಈ ಕಥೆಯ ನಿರೂಪಕರ ಬಾಲ್ಯದ ಗೆಳೆಯ. ಅವರ ಅಕ್ಕನಿಗೆ ಸಂಬಂಧಿಸಿದ ಕತೆ 'ಅಕ್ಕಯ್ಯ' ಆಗಿದೆ. ಈ ಕಥೆಯ ಪ್ರಧಾನ ಕೇಂದ್ರ ಶ್ರೀನಿವಾಸನಾಗಿದ್ದರೂ 'ಅಕ್ಕಯ್ಯ'ನೇ ಕೇಂದ್ರಿಕರಿಸುವುದು ಇಲ್ಲಿ ಗಮನ ಸೆಳೆಯುತ್ತದೆ. ಶ್ರೀನಿವಾಸ ಬಾಲ್ಯದಲ್ಲಿಯೇ ತುಂಬಾ ತುಂಟಾಟದ ಪೋಕರಿ ಹುಡುಗ. ಆದರೆ ಮುಂದೆ ಗಣ್ಯವ್ಯಕ್ತಿಯಾದನು. ನಿರೂಪಕರಿಗೆ ಬರಹಗಾರನಾಗಲು ಸಹಾಯ ಮಾಡಿದವರು. ಶ್ರೀನಿವಾಸ ತನ್ನ ಬಂಡಾಯದ ಮನಃಸ್ಥಿತಿಯಿಂದಾಗಿ ಪಂಜಾಬಿ ಹುಡುಗಿಯನ್ನು ವಿವಾಹವಾಗಿ ಅಮೇರಿಕಾದಲ್ಲಿ ನೆಲೆನಿಂತನು. ತನ್ನ ಹಿರಿಯರ ಪಾಲು ಕೇಳಲು ಮುಂದೆ ಬರದೆ ಇರುವುದು ಕೂಡ ಬಂಡಾಯದ ಮನಃಸ್ಥಿತಿಯಾಗಿದೆ. "ಒಮ್ಮೆ ಮಾತ್ರ ಶ್ರೀನಿವಾಸ ತನ್ನ ಹದಿನೈದು ವರ್ಷಗಳನ್ನು ಕಳೆದ ತೀರ್ಥಹಳ್ಳಿ ಬಳಿಯ ತನ್ನ ಆಗಾಧವಾದ ಕತ್ತಲೆಯ ಹೆಂಚಿನ ಹಳ್ಳಿ ಮನೆಗೆ ಕರೆದುಕೊಂಡು ಹೋಗಿ ಭಿನ್ನವಾಗಿ ಬಿಟ್ಟಿದ್ದ"[2] ಎಂಬ ಹೇಳಿಕೆಯನ್ನು ಗಮನಿಸಿದಾಗ ಅವರ ಈ ಸಣ್ಣ ಕಥಾ ಸಂಕಲನದ ಹಲವು ಕಥೆಗಳಲ್ಲಿ ಶಿವಮೊಗ್ಗ, ತೀರ್ಥಹಳ್ಳಿ ಮೊದಲಾದ ಮಲೆನಾಡಿನ ಪ್ರದೇಶಗಳು ಬರುತ್ತವೆ. ಅದಕ್ಕೆ ಕಾರಣ ಅನಂತಮೂರ್ತಿಯವರು ಕೂಡ ಇದೆ ಭಾಗದವರು. ಹಾಗಾಗಿ ಅವರ ವ್ಯಕ್ತಿತ್ವ ಆಂಶಿಕ ಭಾಗವಾಗಿಯೇ ಇವುಗಳನ್ನು ನೋಡಬೇಕು. ಜೊತೆಗೆ ವಿದೇಶಗಳಿಗೆ ಹೋಗಿ ವಿದ್ಯಾಭ್ಯಾಸ ಪಡೆದು ಬರುವ ನಾಯಕರು, ಬ್ರಾಹ್ಮಣ ವರ್ಗದ ರೀತಿ-ನೀತಿಗಳು, ಅವರ ಆಚಾರಗಳು ಮೊದಲಾದ ವಿಚಾರಗಳು ಅವರ ಕಥೆಗಳಲ್ಲಿ ಸರ್ವೆ ಸಾಮಾನ್ಯವಾದುದು. ಇದು ಕೂಡ ಅವರು ಈ ಕುಟುಂಬದ ಹಿನ್ನೆಲೆಯಿಂದ ಬಂದಿರುವುದು ಅದರ ಪ್ರಭಾವವಾಗಿದೆ.

ಈ ಕಥೆಗಳನ್ನು ಓದುತ್ತಿದ್ದರೆ ಅನಂತಮೂರ್ತಿಯವರೇ ಈ ಕಥೆಯ ನಾಯಕನಿರಬಹುದು. ಅವರು ವಿದೇಶದಲ್ಲಿ ಶಿಕ್ಷಣ ಪಡೆದ ಬಗ್ಗೆ ಹಾಗೂ ತಾನು ಬರಹಗಾರನಾಗಿ ಆಗಲು ಕಾರಣವಾದ ವಿಚಾರಗಳು ಮತ್ತು 'ಕಾಮರೂಪಿ' ಕಥೆಯಲ್ಲಿಯೂ ಕೂಡ ಬರಹಗಾರನಾಗಿ ತಮ್ಮ ಬರಹದ ಮೇಲೆ ಪ್ರಭಾವಿಸಿದ ಇಂಗ್ಲೀಷ್‌ನ ಬರಹಗಾರಾದ ಕುಂಡೇರಾನ್‌ನ ಬರಹದ ಬಗ್ಗೆ, ಕವಿ ಯೀಟ್ಸ್‌ನ ಬರಹದ ಬಗ್ಗೆ ದಾಖಲಿಸುತ್ತಾರೆ. ಹೀಗೆ ಅವರ ಹಲವು ಕಥೆಗಳಲ್ಲಿ ಆಂಶಿಕವಾಗಿ ಅನಂತಮೂರ್ತಿಯವರ ವ್ಯಕ್ತಿತ್ವ ದಾಖಲಾಗಿದೆ.

ಈ ಕಥೆಯ ಆರಂಭದಲ್ಲಿ ನಾಯಕ ಶ್ರೀನಿವಾಸ್‌ನ ಹೆಸರನ್ನು ಬದಲಾಯಿಸಲಾಗಿದೆ ಎನ್ನುವಲ್ಲಿ ಇದು ಅನಂತಮೂರ್ತಿಯವರ ಬದುಕಿನ ಭಾಗವಾಗಿರಬಹುದೇ ಎಂಬ ಅನುಮಾನ ಅಥವಾ ಶಂಕೆ ಮೂಡುವುದು ಸಹಜ.

ಅಕ್ಕಯ್ಯನಿಗೆ ಬಾಲ್ಯದಲ್ಲಿಯೇ ವಿವಾಹ ಮಾಡಿಕೊಡಲಾಗಿತ್ತು. ಆದರೆ ವರದಕ್ಷಿಣೆಯ ಆಸೆಗಾಗಿ ಗಂಡ ಈಕೆಯನ್ನು ಮದುವೆಯಾಗಿ ನಂತರ ಬಿಟ್ಟು ಬಿಡುವುದು. ಆಕೆ ತನ್ನ ತವರು ಮನೆಯಲ್ಲಿ ಉಳಿಯುವುದು, ಮನೆಯ ಕೆಲಸಗಳೊಂದಿಗೆ ಕುಟುಂಬದ ಸದಸ್ಯರೆಲ್ಲರ ಜೊತೆ ಪ್ರೀತಿ ವಾತ್ಸಲ್ಯದಿಂದ ಇರುವಳು. ಮನೆಯ ಸದಸ್ಯರು ಮಾತ್ರವಲ್ಲದೆ ಸಾಕಿದ ದನಗಳೊಂದಿಗೂ ಆತ್ಮೀಯ ಭಾವ ಆಕೆಯಲ್ಲಿತ್ತು. ಆ ದನಗಳಿಗೆ ಪ್ರತಿಯೊಂದಕ್ಕೂ ಹೆಸರನ್ನು ಇಡುವುದು, ಅವುಗಳಿಗೂ ಕೂಡ ಅಷ್ಟೆ, ಇವಳೆಂದರೆ ಅಚ್ಚುಮೆಚ್ಚು. 'ಪಿಳ್ಳ' ಎಂಬ ಮನೆಯ ಕೆಲಸದಾಳು ಆತನು ಈಕೆಗೆ ಗೌರವವನ್ನು ನೀಡುತ್ತಿದ್ದನು. ಮನೆಯಲ್ಲಿದ್ದು ದನ, ಆಳು, ಕುಟುಂಬದ ಸದಸ್ಯರು ಎಲ್ಲಾ ವಿಚಾರಗಳಿಗೂ ಜನ್ಮ ಜನ್ಮಾಂತರದ ಸಂಬಂಧವು ಕಲ್ಪಿಸಿಕೊಳ್ಳುತ್ತಿದ್ದಳು.

ಕಥನಕಾರರು ಇಲ್ಲಿ ಏಕಕಾಲದಲ್ಲಿಯೇ ಅಮೇರಿಕಾದಲ್ಲಿನ ಶ್ರೀನಿವಾಸ ಮತ್ತು ಆತನ ಕುಟುಂಬ, ಸಾಮಾಜಿಕ ಜೀವನದೊಂದಿಗೆ ಅಕ್ಕಯ್ಯನ ನೆನಪಿನ ಮೂಲಕ ತನ್ನ ಊರಿನಲ್ಲಿ ನಡೆಯುತ್ತಿದ್ದ ಬದುಕಿನ ಬಗ್ಗೆ ತಿಳಿಸುವುದು ಪ್ರತಿಯೊಬ್ಬ ವ್ಯಕ್ತಿಯು ಆಧುನಿಕತೆಗೆ ಒಗ್ಗಿಕೊಂಡಿದ್ದರೂ. ತನ್ನ ಮೂಲನೆಲೆಯಾದ ಪರಂಪರೆಯೊಂದಿಗೆ ಸಂಬಂಧವನ್ನು ಬೆಸೆಯಲು ಸಮಯ ಸಿಕ್ಕಾಗೆಲ್ಲಾ ಆತ ತವಕಿಸುತ್ತಿರುತ್ತಾನೆ ಎಂಬುದನ್ನು ಶ್ರೀನಿವಾಸನು ತನ್ನ ಅಕ್ಕಯ್ಯನ ಬಗ್ಗೆ ಅವಳ ವ್ಯಕ್ತಿತ್ವದ ಬಗ್ಗೆ ನಿರೂಪಕರಿಗೆ ತಿಳಿಸುವ ಸಂದರ್ಭದಲ್ಲಿ ಗೋಚರವಾಗುತ್ತದೆ.

ಪ್ರತಿಯೊಬ್ಬರು ಪಾಶ್ಚಾತ್ಯ ದೃಷ್ಟಿಕೋನದಿಂದ ನಾವು ಭಾರತದ ಬದುಕನ್ನು ನೋಡಲು ಹೋಗುತ್ತೇವೆ. ಅದು ತಪ್ಪು. ಭಾರತೀಯತೆಯನ್ನು ಭಾರತೀಯ ಮನೋಧರ್ಮದಿಂದಲೇ ನೋಡಬೇಕು. ಪಾಶ್ಚಾತ್ಯ ಗ್ರಹಿಕೆಯಿಂದ ನೋಡಲು ಹೋದರೆ ಅದರ ಗ್ರಹಿಕೆಯೇ ತಪ್ಪು ಆಗಿ ಪರಿಣಮಿಸುತ್ತದೆ ಎಂಬುದು

ಅನಂತಮೂರ್ತಿಯವರ ಈ ಕಥೆಯ ತಾತ್ವಿಕತೆಯಾಗಿದೆ. ಯಾವುದೇ ಒಬ್ಬ ಬರಹಗಾರ ಪಾಶ್ಚಾತ್ಯ ಸಾಹಿತ್ಯ ಪರಂಪರೆಯ ಮಾದರಿಯನ್ನು ಇಟ್ಟುಕೊಂಡು ಸೃಜನಶೀಲ ಸಾಹಿತ್ಯದಲ್ಲಿ ತೊಡಗಿದ್ದರೂ, ಅದರಲ್ಲಿ ಭಾರತೀಯತೆಯನ್ನು ಗ್ರಹಿಸಲು ಹೋದರೆ ಅದು ದಕ್ಕಲೂ ಸಾಧ್ಯವಿಲ್ಲ ಎಂಬುದು ಅನಂತಮೂರ್ತಿಯವರ ನಿಲುವು, ಆ ಮೂಲಕ ನವ್ಯಕಾಲ ಘಟ್ಟದ ಬರಹಗಾರರಿಗೆ ಭಾರತೀಯತೆಯ ದೃಷ್ಟಿಯಿಂದಲೇ ನಾವು ಭಾರತೀಯ ಪರಂಪರೆಯನ್ನು ವ್ಯಾಖ್ಯಾನಿಸಬೇಕೆ ಹೊರತು ಪಾಶ್ಚಾತ್ಯ ಸಿದ್ಧಾಂತಗಳಿಂದ ಅಲ್ಲವೆಂಬ ಸಂದೇಶವನ್ನು ನೀಡುತ್ತಾರೆ.

"ಅಂದರೆ ಮೊದಲು ಮಾರ್ಕ್ಸಿಸ್ಟ್ ಪ್ರಗತಿಶೀಲನಾದದ್ದು, ಆಮೇಲೆ ಲಿಬರಲ್ ಆದದ್ದು, ಆಮೇಲೆ ಆಧುನಿಕನಾದದ್ದು, ಈಗ ಪೋಸ್ಟ್ ಮಾಡರ್ನಿಸ್ಟ್ ಆಗಿರೋದು– ಈಗ ಹಿಂದಕ್ಕು ಹೋಗಲಾರೆ. ಆದರೆ ಅವಳ ಪ್ರಪಂಚ ಸುಳ್ಳಾಂತ ಸಾಧಿಸೋ ನಿಯೋಕಲೋನಿಯಲಿಸ್ಟ್ ಬದ್ಮಾಶ್ ಕೂಡ ಆಗಲಾರೆ"[3] ಎಂಬ ಶ್ರೀನಿವಾಸನ ಮಾತಿನಲ್ಲಿ ಅನಂತಮೂರ್ತಿಯವರ ತಾತ್ವಿಕ ನಿಲುವು ಕೂಡ ಇದು ಆಗಿರಬಹುದೆಂದು ನಮಗೆ ಅನ್ನಿಸುತ್ತದೆ.

ಶ್ರೀನಿವಾಸನು ನಿರೂಪಕರೊಂದಿಗೆ ಹಾಡುತ್ತಾ ಕುಣಿಯುತ್ತಾ ಇರುವಾಗ ಆತ ಹೇಳುವ 'ಇಲ್ಲಿರಲಾರೆ, ಅಥವಾ ಅಲ್ಲಿಗೂ ಹೋಗಲಾರೆ' ಎಂಬ ಹಾಡಿನ ಒಳ ಧ್ವನಿಯು ಪಾಶ್ಚಾತ್ಯಕರಣಕ್ಕೆ ಒಳಗಾಗಿ ಆಧುನಿಕತೆಯನ್ನು ಒಪ್ಪಿದ ವ್ಯಕ್ತಿ ಅದರಲ್ಲಿ ಇರಲಾಗದೆ ಇತ್ತ ತನ್ನ ಪರಂಪರೆಯ ಕಡೆಗೂ ಹೋಗಲಾರದ ದ್ವಂದ್ವ ಸ್ಥಿತಿಯನ್ನು ತಿಳಿಸುತ್ತದೆ. 'ಅಕ್ಕಯ್ಯ'ನ ಕಥೆಯ ಮೂಲಕ ಆಧುನಿಕತೆ ಮತ್ತು ಪರಂಪರೆಗಳನ್ನು ಮುಖಾಮುಖಿಯಾಗಿವೆ. 'ಸೂರ್ಯನ ಕುದುರೆ' ಕಥೆಯಲ್ಲಿ ಇವುಗಳೆರಡರ ನಡುವೆ ಅನುಸಂಧಾನದ ತಾತ್ವಿಕತೆಗೆ ಉತ್ತರವನ್ನು ನೀಡುತ್ತಾರೆ ಎನ್ನಬಹುದು.

ಮನುಷ್ಯನಲ್ಲಿರುವ ಪರಕೀಯತೆಯನ್ನು ಕಿತ್ತೊಗೆದು, ತನ್ನತನವನ್ನು ಶೋಧಿಸುವ ಕಥೆ 'ಜರತ್ಕಾರು' ಆಗಿದೆ. ಪುರಾಣ, ಕಾವ್ಯ, ಇತಿಹಾಸವನ್ನು ಕಥೆಗೆ ಅಳವಡಿಸಿಕೊಂಡು ತಮ್ಮದೇಯಾದ ಚೌಕಟ್ಟನ್ನು ನೀಡಿದವರು ನವ್ಯಕಾಲದವರು. ಅದರಂತೆ ಅನಂತಮೂರ್ತಿಯವರು 'ಜರತ್ಕಾರು' ಕಥೆಯ ವಸ್ತುವಿನಲ್ಲಿ ನಿರೂಪಣೆಯಲ್ಲಿ ಭಿನ್ನವಾಗಿ ಅಭಿವ್ಯಕ್ತಿಸಿದ್ದಾರೆ.

ಈ ಕಥೆಯಲ್ಲಿ ತಿಮ್ಮಪ್ಪ ಒಬ್ಬ ಬರಹಗಾರನಾಗಿದ್ದು ಈತನ ತಾಯಿ ಬಹಳ ಮಡಿವಂತಿಕೆಯಿಂದ ಇರುವ ಹೆಣ್ಣು. ತನ್ನ ಗಂಡನನ್ನು ಕಳೆದುಕೊಂಡಿದ್ದರೂ ತಿಮ್ಮಪ್ಪನಿಗೆ ಯಾವುದೇ ಕುಂದು ಬರದ ಹಾಗೇ ಸಾಕಿ ಬೆಳೆಸಿದವಳು. ಆದರೆ ತನ್ನ ಮಡಿವಂತಿಕೆಯ ವಿರುದ್ಧವಾದ ವ್ಯಕ್ತಿತ್ವ ತಿಮ್ಮಪ್ಪನದು ಆಗಿತ್ತು. ತನ್ನ ಮಡಿಗಾಗಿ ತನ್ನ ಮನೆಯಲ್ಲಿ ಪ್ರತ್ಯೇಕ ಕೋಣೆ ಮಾಡಿರುವುದು ಮಗನಿಗೆ ಎಲ್ಲಾ ರೀತಿಯ ಸೌಲಭ್ಯ

ನೀಡುವ ಮತ್ತೊಂದು ಕೋಣೆ. ಈತನಿಗೆ ಅಡುಗೆ ಮಾಡಲು ದೈನಂದಿನ ಸಹಾಯಕ್ಕಾಗಿ ಕಮಲ ಎಂಬ ಹುಡುಗಿ. ಈತ ಬರೆದ ಕಥೆ, ಕಾದಂಬರಿಯನ್ನು ಟೈಪ್ ಮಾಡುವವಳು ಇವಳೇ. ಈತ ಆಕೆಯನ್ನು ದೈಹಿಕವಾಗಿ ಬಳಸಿ ಆಕೆಯನ್ನು ಗರ್ಭವತಿ ಮಾಡುತ್ತಾನೆ. ಇದು ತಾಯಿಗೆ ಗೊತ್ತಾಗಿ ತಾನು ಸಾಯುವ ಮೊದಲು ವಿಲ್ ಮಾಡಿದ್ದು ಇಡೀ ಆಸ್ತಿಯು ಕಮಲಳಿಗೆ ಹುಟ್ಟುವ ಮಗುವಿನ ಹೆಸರಿನಲ್ಲಿ ಬರೆಯುತ್ತಾಳೆ. ಕೊನೆಗೆ ಪತ್ರದಲ್ಲಿ ತಿಮ್ಮಪ್ಪನ ತಾಯಿ ತನಗೆ ಶ್ರಾದ್ಧಕಾರ್ಯ ಮಾಡಬೇಕೆಂದು ತಿಳಿಸುವುದು. ನಂಬಿಕೆ ಇಲ್ಲದಿದ್ದರೂ ತಿಮ್ಮಪ್ಪ ತನ್ನ ತಾಯಿಗೆ ಶ್ರಾದ್ಧಕಾರ್ಯಗಳನ್ನು ಮಾಡುತ್ತಾನೆ. ಕೊನೆಗೆ ಕಮಲಳನ್ನು ಪತ್ನಿಯಾಗಿ ಸ್ವೀಕರಿಸುತ್ತಾನೆ. ಇಲ್ಲಿ ತನ್ನ ಪರಕೀಯತೆಯ ಭಾವದಿಂದ ಮಾನಸಿಕ ತೊಳಲಾಟದ ವ್ಯಕ್ತಿಯಾಗಿ ತಿಮ್ಮಪ್ಪ ಕಾಣುತ್ತಾನೆ. ಆ ಮಾನಸಿಕ ತೊಳಲಾಟದಿಂದ ಕೊನೆಗೆ ಹೊರಬರಲು ಪ್ರಯತ್ನಿಸುತ್ತಾನೆ.

ಈ ಕಥಾ ಸಂಕಲನದಲ್ಲಿರುವ ನಾಲ್ಕು ಕಥೆಗಳಲ್ಲಿ ಅನಂತ ಮೂರ್ತಿಯವರ ಆಂಶಿಕ ವ್ಯಕ್ತಿತ್ವವನ್ನು ಗುರುತಿಸಲು ಸಾಧ್ಯ ಎನ್ನಬಹುದು. ಆ ಮೂಲಕ ಬರಹಗಾರನ ಯಾವುದೇ ಬರವಣಿಗೆಯಲ್ಲಿಯೂ ಆತನ ಅನುಭವಗಳ ದಾಖಲೆಯೊಂದಿಗೆ ಆತನ ವ್ಯಕ್ತಿತ್ವವು ದಾಖಲಾಗಿರುತ್ತದೆ. ಜಿ.ಎಸ್. ಅಮೂರರು ಈ ಕಥಾಸಂಕಲನ ಪ್ರಸ್ತಾವನೆಯಲ್ಲಿ ದಾಖಲಿಸಿದ ಹಾಗೆ ಇಲ್ಲಿನ ಕಥೆಗಳಿಗೆ ಸಂಬಂಧಿಸಿದಂತೆ 'ಸೂರ್ಯನ ಕುದುರೆ' ಕಥೆಯಲ್ಲಿ ವ್ಯಕ್ತಿಯ ಆಧುನಿಕತೆಗೆ ಒಳಗಾಗುವ ಪ್ರಸಂಗಗಳು, 'ಕಾಮರೂಪಿ' ಕಥೆಯಲ್ಲಿ ರಾಜಕೀಯದೊಡನೆ ಮುಖಾಮುಖಿಯಾಗಿ ಸಾಗುವುದು, 'ಅಕ್ಕಯ್ಯ' ಕಥೆಯಲ್ಲಿ ಆಧುನಿಕತೆಯ ಪ್ರವಾಹಕ್ಕೆ ಸಿಲುಕಿದ ವ್ಯಕ್ತಿ ನಡೆಸುವ ಮಾನಸಿಕ ತೊಳಲಾಟ, 'ಜರತ್ಕಾರು' ಕಥೆಯಲ್ಲಿ ಒಬ್ಬ ಲೇಖಕ ತಾನು ಅನುಭವಿಸುವ ಮಾನಸಿಕ ಸಂಘರ್ಷಗಳು ಇವುಗಳು ನಾನಾ ರೀತಿಯಲ್ಲಿ ಅಭಿವ್ಯಕ್ತಿಸಿದ ವಿಶಿಷ್ಟ ಕಥೆಗಳಾಗಿವೆ.

**ಕೊನೆ ಟಿಪ್ಪಣಿಗಳು:**

1. ಅನಂತಮೂರ್ತಿ ಯು.ಆರ್., (2012), ಸೂರ್ಯನ ಕುದುರೆ, ವಸಂತ ಪ್ರಕಾಶನ, ಬೆಂಗಳೂರು, ಪು.ಸಂ. 7
2. ಅದೇ, ಪು.ಸಂ. 53
3. ಅದೇ, ಪು.ಸಂ. 63–64

**ಪರಾಮರ್ಶನ ಗ್ರಂಥಗಳು:**

1. ಅನಂತಮೂರ್ತಿ ಯು.ಆರ್., (2012), ಸೂರ್ಯನ ಕುದುರೆ, ವಸಂತ ಪ್ರಕಾಶನ, ಬೆಂಗಳೂರು.
2. ರಹಮತ್ ತರಿಕೆರೆ, (2019), ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
3. ಅಶೋಕ್ ಟಿ.ಪಿ., (2018), ಕಥನ ಭಾರತಿ, ಮಣಿಪಾಲ್ ಯುನಿವರ್ಸಲ್ ಪ್ರೆಸ್, ಮಣಿಪಾಲ್.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.